ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 259/2022

(ಫ್ರಾಸಾ-10 ಚಾಸಾ-19)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 06.05.2025

| | | |
|---|---|---|
| ಸಾಕ್ಷಿದಾರರ ಹೆಸರು | - | ಸಂಪಂಗಿರೆಡ್ಡಿ |
| ತಂದೆಯ ಹೆಸರು | - | ತಿಮ್ಮರಾಯಪ್ಪ |
| ವಯಸ್ಸು | - | 50 ವರ್ಷ, |
| ಉದ್ಯೋಗ | - | ಕಾಂಟ್ರಕ್ಟರ್ |
| ವಾಸ | - | ಬೇಗೂರು. |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಹೆಬ್ಬಗೋಡಿಯಲ್ಲಿ ನನ್ನ ಮಾಲೀಕತ್ವದ ಮನೆ ಇದ್ದು ಅದನ್ನು ನಾನು ಬಾಡಿಗೆಗೆ ನೀಡುತ್ತಿರುತ್ತೇನೆ. ಡಿಸೆಂಬರ್ 2021 ರಲ್ಲಿ ನಾನು ಸಾಗರ್ ಎನ್ನುವವರಿಗೆ ಸದರಿ ಮನೆಯನ್ನು ರೂ.3,800/-ರಂತೆ ಬಾಡಿಗೆಗೆ ನೀಡಿದ್ದೆನು. ಸಾಗರ್ 2 ತಿಂಗಳು 20 ದಿನಗಳವರೆಗೆ ಸದರಿ ನನ್ನ ಮನೆಯಲ್ಲಿ ಬಾಡಿಗೆಗೆ ವಾಸವಿದ್ದರು. ಸಾಗರ್ ಇವರು ಬೊಮ್ಮಸಂದ್ರದಲ್ಲಿರುವ ಮಹೀಂದ್ರಾ ಎಲ್ಕ್ಟ್ರೀಕಲ್ಸ್ ನಲ್ಲಿ ಕೆಲಸಕ್ಕೆ ಹೋಗುತ್ತಿದ್ದರು.

2. ದಿಃ10.01.2022 ರಂದು ಸಾಗರ್ ಇವರು ಕೆಲಸಕ್ಕೆ ಹೋಗುತ್ತೇನೆ ಎಂದು ಹೋದವರು ಮತ್ತೆ ವಾಪಸ್ಸು ಮನೆಗೆ ಬರಲಿಲ್ಲ. ಸಾಗರ್ ಈತನು ಕೊಲೆಯಾದ ಬಗ್ಗೆ ದಿಃ15.01.2022 ರಂದು ತಿಳಿದುಬಂತು. ಹುಲಿಮಂಗಲದ ಸರ್ವೆ ನಂಬರ್ 350 ಕಸ ಹಾಕುವ ಜಾಗದಲ್ಲಿ ಸಾಗರ್ ನನ್ನು 1 ಮತ್ತು 2 ನೇ ಆರೋಪಿತರು ದೊಣ್ಣೆಯಿಂದ ಹಲ್ಲೆ ಮಾಡಿ ಸಾಗರ್ ನನ್ನು ಕೊಲೆ ಮಾಡಿ ಪೆಟ್ರೋಲ್ ಹಾಕಿ ಸುಟ್ಟು ಹಾಕಿರುತ್ತಾರೆ ಎಂದು ನನಗೆ ತಿಳಿದುಬಂತು. ಈ ಘಟನೆಯ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ</u> <u>1 ನೇ ಆರೋಪಿ ಪರ ಶ್ರೀ ಸಿ ಎಂ ವಕೀಲರಿಂದಃ</u>**

3. ಸಾಗರ್ ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದ ಬಗ್ಗೆ ನಾನು ಬಾಡಿಗೆ ಕರಾರು ಪತ್ರವನ್ನು ಪೋಲಿಸರಿಗೆ ನೀಡಿರುವುದಿಲ್ಲ. ಸದರಿ ಮನೆಗೆ ನಾನೇ ಮಾಲೀಕ ಎಂದು ತೋರಿಸಲು ನೊಂದಾಯಿತ ದಾಖಲಾತಿಗಳನ್ನು ಪೋಲಿಸರಿಗೆ ಕೊಟ್ಟಿರುತ್ತೇನೆ. 2002 ರಲ್ಲಿ ನಾನು ಸದರಿ ಮನೆಯನ್ನು ಖರೀದಿ ಮಾಡಿದ್ದೆ. ನಾನು ಹೇಳಿದಂತೆ ಯಾವುದೇ ನೊಂದಾಯಿತ ದಾಖಲಾತಿಗಳನ್ನು ಪೋಲಿಸರಿಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

4. ಸಾಗರ್ ತಾನು ಎಷ್ಟು ಘಂಟೆಗೆ ಕೆಲಸಕ್ಕಾಗಿ ಮನೆ ಬಿಡುತ್ತಿದ್ದ ಹಾಗೂ ಎಷ್ಟು ಘಂಟೆಗೆ ಕೆಲಸ ಮುಗಿಸಿ ಬರುತ್ತಿದ್ದ ಎಂದು ಸಾಗರ್ ನನಗೆ ತಿಳಿಸುತ್ತಿರಲಿಲ್ಲ. ಸಾಗರ್ ಇವರು ಮಹೀಂದ್ರಾ ಎಲೆಕ್ಟ್ರಿಕಲ್ ನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ನಾನು ಗುರುತಿನ ಚೀಟಿಯ ನಕಲನ್ನು ಪಡೆದಿದ್ದೆನು. ಸದರಿ ಗುರುತಿನ ಚೀಟಿಯ ನಕಲನ್ನು ಪೋಲಿಸರಿಗೆ ನೀಡಲು ತೊಂದರೆ ಇರಲಿಲ್ಲ. ದಿಃ10.01.2022 ರಂದು ಮನೆ ಬಿಟ್ಟ ಸಾಗರ್ ಮರಳಿ ಬರಲಿಲ್ಲ ಎಂದು ನನಗೆ ದಿಃ15.01.2022 ರಂದು ಗೊತ್ತಾಯಿತು. ಈ ನಡುವಿನ ದಿನಗಳಲ್ಲಿ ನಾನು ಸಾಗರ್ ಗೆ ಫೋನ್ ಮಾಡುವುದಾಗಲೀ ಅಥವಾ ಆತನ ಸಂಬಂಧಿಕರನ್ನು ಸಂಪರ್ಕಿಸುವುದಾಗಲೀ ಪ್ರಯತ್ನ ಮಾಡಲಿಲ್ಲ. ದಿಃ15.01.2022 ರಂದು ಹಾಗೂ ದಿಃ17.01.2022 ರಂದು ನಾನು ಪೋಲಿಸ್ ಠಾಣೆಗೆ ಹೋಗಿದ್ದು ನಂತರ ನಾನು ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ. ದಿಃ17.01.2022 ರಂದು ಪೋಲಿಸರು ನನ್ನ ಹೇಳಿಕೆಯನ್ನು ಪಡೆದರು. ದಿಃ25.01.2022 ರಂದು ನಾನು ಪೋಲಿಸ್ ಠಾಣೆಗೆ ಹೋಗಿಲ್ಲ. ಆರೋಪಿತರು ಸಾಗರ್ ನನ್ನು ಹಲ್ಲೆ ಮಾಡಿ ಕೊಲೆ ಮಾಡಿದ್ದನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ. ಬೇರೆಯವರಿಂದ ನನಗೆ ಗೊತ್ತಾಗಿ ನಾನು ಸಾಗರ್ ನು ಕೊಲೆಯಾದ ಬಗ್ಗೆ ಸಾಕ್ಷಿ ಹೇಳುತ್ತಿದ್ದೇನೆ. ಆರೋಪಿತರನ್ನು ನಾನು ಈ ಹಿಂದೆ ನೋಡಿರಲಿಲ್ಲ.

**<u>ಪಾಟೀ ಸವಾಲುಃ</u> 2 <u>ನೇ ಆರೋಪಿ ಪರ ಶ್ರೀ ವಿ ಕೆ ವಕೀಲರಿಂದಃ</u>**

2 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನಿವೇದಿಸಿರುತ್ತಾರೆ.

**<u>ಮರುವಿಚಾರಣೆಃ ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು